**ಪದ್ಮಾ ಮೂರ್ತಿ ಅರಸೀಕೆರೆ**
ಕಲೆ: ಗಣೇಶ ಆಚಾರ್ಯ

# ಚಿನ್ನದ ಪೊರಕೆ



ಪ್ರಾಚೀನ ಕಾಲದಲ್ಲಿ ಒಡಿಶಾದ ಜಗನ್ನಾಥ ಪುರಿ ರಾಜ್ಯವನ್ನು ವೀರಸುಧನ್ವ ಎಂಬ ಮಹಾರಾಜ ಆಳುತ್ತಿದ್ದ. ಅವನು ಸುಂದರ, ಹೆಸರಿಗೆ ತಕ್ಕಂತೆ ಪರಾಕ್ರಮಿ. ಅವನ ಮದುವೆಗಾಗಿ ಅನೇಕ ರಾಜಕುಮಾರಿಯರ ಭಾವಚಿತ್ರಗಳು ಬರುತ್ತಿದ್ದವು. ಅದರಲ್ಲಿ ಸುಧನ್ವನಿಗೆ ಕಾಶಿ ದೇಶದ ರಾಜಕುಮಾರಿ ಸೌಗಂಧಿಕಾ ಇಷ್ಟವಾದಳು. ಅವಳ ಸೌಂದರ್ಯಕ್ಕೆ ಮಾರುಹೋಗಿ ಕಾಶಿರಾಜನಿಗೆ ಅವನ ಮಗಳನ್ನು ತನಗೆ ಕೊಟ್ಟು ಮದುವೆ ಮಾಡಲು ವಿನಂತಿಸಿ, ತನ್ನ ಮಂತ್ರಿ ಮತ್ತು ರಾಯಭಾರಿಯನ್ನು ಕಾಶಿಗೆ ಕಳುಹಿಸಿದ. ಕಾಶಿರಾಜ ಮತ್ತು ರಾಜಕುಮಾರಿ ಸೌಗಂಧಿಕಾ ಇಬ್ಬರೂ ವೀರಸುಧನ್ವನ ಭಾವ ಚಿತ್ರವನ್ನು ನೋಡಿ ಒಪ್ಪಿದರು. ಆದರೆ ಅವನ ರಾಜ್ಯ, ಅವನ ಗುಣ ವಿಶೇಷದ ಬಗ್ಗೆ ಅವರಿಗೆ ಗೊತ್ತಿರಲಿಲ್ಲ. ಹೀಗಾಗಿ ಕಾಶಿಮಹಾರಾಜನು ಸುಧನ್ವನ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿದುಕೊಂಡು ಬರುವಂತೆ ತನ್ನ ಮಂತ್ರಿಯನ್ನು ಕಳುಹಿಸಿಕೊಟ್ಟ.

ಮಾರುವೇಷದಲ್ಲಿ ಮಂತ್ರಿ ಅಲ್ಲಿಗೆ ಬಂದ ದಿವಸವೇ ಪುರಿ ಜಗನ್ನಾಥನ ರಥೋತ್ಸವ ನಡೆಯಲಿತ್ತು. ಪುರಿ ಜಗನ್ನಾಥ ರಾಜವಂಶಸ್ಥರ ಮನೆ ದೇವರು. ರಾಜವಂಶದ ಪದ್ಧತಿಯಂತೆ ಆ ದಿನ ಮಹಾರಾಜರು ಜಗನ್ನಾಥ ಸ್ವಾಮಿಯ ಸೇವಕನಾಗಿ ರಥಬೀದಿಯನ್ನು ಗುಡಿಸುವ ಕೆಲಸ ಮಾಡಬೇಕು. ಸುಧನ್ವನು ಭಕ್ತಿಭಾವದಿಂದ ಚಿನ್ನದ ಪೊರಕೆಯಿಂದ ರಥಬೀದಿಯನ್ನು ಗುಡಿಸುತ್ತಿದ್ದ. ಕಾಶಿ ರಾಜ್ಯದ ಮಂತ್ರಿಗೆ ಈ ಹಿನ್ನೆಲೆ ಅರ್ಥವಾಗಲಿಲ್ಲ. ನೇರ ತನ್ನ ರಾಜ್ಯಕ್ಕೆ ಹೋಗಿ ಮಹಾರಾಜನ ಹತ್ತಿರ, 'ಮಹಾರಾಜನೇನೋ ಸುಂದರವಾಗಿದ್ದಾನೆ ಆದರೆ ಜಾಡಮಾಲಿಯಂತೆ ಚಿನ್ನದ ಪೊರಕೆಯಿಂದ ಬೀದಿ ಕಸ ಗುಡಿಸುತ್ತಾನೆ. ಯೋಚಿಸಿ ನೋಡಿ' ಎಂದ.

ಮಂತ್ರಿಯ ಮಾತು ಕೇಳಿ ಕಾಶಿ ರಾಜನಿಗೆ ಬೇಸರವಾಯಿತು. 'ನನ್ನ ಅಳಿಯನಾಗುವವನು ಜಾಡಮಾಲಿಯ ಕೆಲಸ ಮಾಡುತ್ತಾನೆ ಎಂದರೆ ನನಗೆ ಅವಮಾನ. ನಮಗೆ ಈ ಸಂಬಂಧ ಹೊಂದುವುದಿಲ್ಲ. ಚಿನ್ನದ ಪೊರಕೆಯಾದರೇನು? ಬೀದಿ ಗುಡಿಸುವನಿಗೆ ನನ್ನ ಮಗಳನ್ನು ಕೊಡುವುದಿಲ್ಲ' ಎಂದು ರಾಯಭಾರಿಯ ಮೂಲಕ ಮದುವೆಗೆ ನಕಾರ ಹೇಳಿ ಕಳಿಸಿಬಿಟ್ಟ. ಕಾಶಿ ರಾಜನ ಉತ್ತರವನ್ನು ಕೇಳಿ ಸುಧನ್ವನಿಗೆ ಅವಮಾನದ ಜೊತೆಗೆ ಕೋಪವೂ ಬಂತು. 'ಇದೆಂಥ ಅಹಂಕಾರದ ಮಾತು! ಇದು ನನಗೊಬ್ಬನಿಗೆ ಆದ ಅವಮಾನವಲ್ಲ, ನನ್ನ ರಾಜ್ಯದ ಭಗವಂತನಾದ ಪುರಿ ಜಗನ್ನಾಥ ಸ್ವಾಮಿಗೂ ಆದ ಅವಮಾನ' ಎಂದು ಭಾವಿಸಿ, ಭಾರಿ ಸೇನೆಯ ಸಮೇತ ಕಾಶಿ ದೇಶದ ಮೇಲೆ ದಂಡೆತ್ತಿ ಹೋಗಿ, ಯುದ್ಧಮಾಡಿ ಕಾಶಿ ರಾಜನನ್ನು ಪರಾಭವಗೊಳಿಸಿದ. ರಾಜಕುಮಾರಿ ಸೌಗಂಧಿಕಾಳನ್ನು ಸೆರೆ ಹಿಡಿದು, ತನ್ನ ದೇಶಕ್ಕೆ ಕರೆತಂದು, ಮಂತ್ರಿಯನ್ನು ಕರೆದು, 'ಈ ದುರಹಂಕಾರಿ ಕಾಶಿ ರಾಜಕುಮಾರಿಯನ್ನು ಒಬ್ಬ ಜಾಡಮಾಲಿಗೆ ಕೊಟ್ಟು ಮದುವೆ ಮಾಡಿ ಬಿಡಿ' ಎಂದು ಹೇಳುತ್ತಾ ತಿರುಗಿ ನೋಡದೆ ಹೊರಟು ಹೋದ.